## ಸೂಕ್ತಿಪ್ರಭ

ಉಭಯೋರ್ನಾಸ್ತಿ ಭೋಗೇಚ್ಛಾ
ಪರಾರ್ಥಂ ಧನಸಂಚಯಃ ।
ಕೃಪಣೋದಾರಯೋಃ ಪಶ್ಯ
ತಥಾಽಪಿ ಮಹದಂತರಮ್ ॥

"ಜಿಪುಣ ಮತ್ತು ಉದಾರಿಗಳಿಬ್ಬರಿಗೂ ತಾವು ಅನುಭವಿಸಬೇಕೆಂಬ ಇಚ್ಛೆಯಿಲ್ಲ. ಇವರಿಬ್ಬರೂ ಪರರಿಗಾಗಿಯೇ ಧನಸಂಚಯ ಮಾಡುವುದು. ಆದರೂ ಇವರಿಬ್ಬರಲ್ಲೂ ಇರುವ ಅಪಾರವಾದ ವ್ಯತ್ಯಾಸವನ್ನು ನೋಡು!"

ನಿರ್ಧನಸ್ಯ ವಿಷಂ ಭೋಗೋ
ನಿಸ್ಸತ್ವಸ್ಯ ವಿಷಂ ರಣಮ್ ।
ಅನಭ್ಯಾಸೇ ವಿಷಂ ಶಾಸ್ತ್ರಂ
ಅಜೀರ್ಣೇ ಭೋಜನಂ ವಿಷಮ್ ॥

"ಬಡವನಿಗೆ ಇಂದ್ರಿಯಭೋಗವೇ ವಿಷ, ಶೌರ್ಯಹೀನನಿಗೆ ಯುದ್ಧವೇ ವಿಷ, ಅಭ್ಯಾಸಮಾಡದವನಿಗೆ ಶಾಸ್ತ್ರಜ್ಞಾನವೇ ವಿಷ ಮತ್ತು ಅಜೀರ್ಣರೋಗಿಗೆ ಭೋಜನವೇ ವಿಷ."

ಸ್ವಾತಂತ್ರ್ಯವೆಂದರೆ ತನ್ನ ಬೆಳವಣಿಗೆಯ ಜವಾಬ್ದಾರಿಯನ್ನು ತಾನೇ ವಹಿಸಿಕೊಳ್ಳುವ ಸಾಮರ್ಥ್ಯ. ಅದು ನಮ್ಮನ್ನು ನಾವು ತಿದ್ದಿಕೊಳ್ಳುವ ಸಾಮರ್ಥ್ಯ.
—ರೋಲೋ ಮೇ **(Rollo May)**

ಅಸ್ವಾತಂತ್ರ್ಯದಲ್ಲಿರುವ ನಂಬಿಕೆಯಿಂದ ಸ್ವಾತಂತ್ರ್ಯವನ್ನು ಪಡೆಯುವುದೇ ನಿಜವಾದ ಸ್ವಾತಂತ್ರ್ಯ.
—ಮಾರ್ಟಿನ್ ಬ್ಯೂಬರ್ **(Martin Buber)**

ನಿಮ್ಮನ್ನು ಯಾರಾದರೂ ಪೀಡಿಸುತ್ತಿದ್ದರೆ, ನಿಮ್ಮ ಪ್ರತಿಕ್ರಿಯೆಯೇ ನಿಮ್ಮನ್ನು ಪೀಡಿಸುತ್ತಿರುವುದು.
—ಎಪಿಕ್ಟಟಸ್

ಒಂದು ವಸ್ತುವನ್ನು ಪ್ರಮಾಣೀಕರಿಸುವುದೆಂದರೆ ಅದಕ್ಕೆ ವಿರುದ್ಧವಾದುದನ್ನು ಅಪ್ರಮಾಣೀಕರಿಸುವುದು. ಅದಕ್ಕೆ ವಿರುದ್ಧವಾದುದನ್ನು ಪ್ರಮಾಣೀಕರಿಸುವುದೆಂದರೆ ಅದನ್ನು ಅಪ್ರಮಾಣೀಕರಿಸುವುದು. ದೇವರಿಗೆ ವಿರುದ್ಧವಾದುದಾವುದೂ ಇಲ್ಲ. ಆದ್ದರಿಂದ ಅವನನ್ನು ಪ್ರಮಾಣೀಕರಿಸುವುದಾಗಲಿ ಅಪ್ರಮಾಣೀಕರಿಸುವುದಾಗಲಿ ಹೇಗೆ ಸಾಧ್ಯ?
—ಮಿಖಾಯಿಲ್ ನೈಮೀ **(Mikhail Naimy)**

ನೀವು ಸಾಯುವುದಕ್ಕೆ ಮುಂಚೆ ಸತ್ತರೆ ಸತ್ತಾಗ ಸಾಯುವುದಿಲ್ಲ. —ಅನಾಮಿಕ

ಪ್ರಪಂಚದ ಎಲ್ಲ ಸಂಪತ್ತನ್ನು ಪಡೆದರೂ ಇನ್ನೂ ಪಡೆಯುವುದು ಉಳಿದಿರುತ್ತದೆ ಮತ್ತು ಅದರ ಕೊರತೆಯಿಂದ ನೀವು ಬಡವರಾಗಿಯೇ ಉಳಿಯುತ್ತೀರಿ.
—ಗ್ರೆಗಾರಿ ನಜಿಯಾನ್ ಜನ್ **(Nazianzen)**

## ಪ್ರಾರ್ಥನೆ

ಶ್ರೀಶಂಕರಾಚಾರ್ಯವಿರಚಿತ
"ಶಿವಾಪರಾಧಕ್ಷಮಾಪಣಸ್ತೋತ್ರ"ದಿಂದ

**ಚಂದ್ರೋದ್ಭಾಸಿತಶೇಖರೇ ಸ್ಮರಹರೇ ಗಂಗಾಧರೇ ಶಂಕರೇ
ಸರ್ಪೈರ್ಭೂಷಿತಕಂಠಕರ್ಣವಿವರೇ ನೇತ್ರೋತ್ಥವೈಶ್ವಾನರೇ
ದಂತಿತ್ವಕ್ಕೃತಸುಂದರಾಂಬರಧರೇ ತ್ರೈಲೋಕ್ಯಸಾರೇ ಹರೇ
ಮೋಕ್ಷಾರ್ಥಂ ಕುರು ಚಿತ್ತವೃತ್ತಿಮಚಲಾಮನ್ಯೈಸ್ತು ಕಿಂ ಕರ್ಮಭಿಃ ॥೧॥**

ಚಂದ್ರನಿಂದ ಉಜ್ಜ್ವಲವಾಗಿ ಬೆಳಗುತ್ತಿರುವ ಲಲಾಟವುಳ್ಳವನೂ, ಮನ್ಮಥನನ್ನು ಸಂಹರಿಸಿದವನೂ, ಗಂಗಾಧರನೂ, ಶಂಕರನೂ, ಕಂಠ-ಕರ್ಣಗಳನ್ನು ಸರ್ಪಗಳಿಂದ ಅಲಂಕರಿಸಿಕೊಂಡಿರುವವನೂ, ನೇತ್ರದಲ್ಲಿ ಅಗ್ನಿಯನ್ನು ಉದ್ಭವಮಾಡಿರುವವನೂ, ಗಜಚರ್ಮವನ್ನೇ ಸುಂದರವಾದ ಅಂಬರವನ್ನಾಗಿ ಧರಿಸಿರುವವನೂ, ಮೂರು ಲೋಕಗಳ ಸಾರಸ್ವರೂಪನೂ ಆದ ಹರನಲ್ಲಿ ಚಿತ್ತವೃತ್ತಿಯನ್ನು ಮೋಕ್ಷಾರ್ಥವಾಗಿ ಸ್ಥಿರಗೊಳಿಸುವವನಾಗು. ಉಳಿದ ಕರ್ಮಗಳಿಂದ ಏನು ಪ್ರಯೋಜನ?

**ಕಿಂ ವಾಽನೇನ ಧನೇನ ವಾಜಿಕರಿಭಿಃ ಪ್ರಾಪ್ತೇನ ರಾಜ್ಯೇನ ಕಿಂ
ಕಿಂ ವಾ ಪುತ್ರಕಲತ್ರಮಿತ್ರಪಶುಭಿರ್ದೇಹೇನ ಗೇಹೇನ ಕಿಮ್ ।
ಜ್ಞಾತ್ವೈತತ್ ಕ್ಷಣಭಂಗುರಂ ಸಪದಿ ರೇ ತ್ಯಾಜ್ಯಂ ಮನೋ ದೂರತಃ
ಸ್ವಾತ್ಮಾರ್ಥಂ ಗುರುವಾಕ್ಯತೋ ಭಜ ಭಜ ಶ್ರೀಪಾರ್ವತೀವಲ್ಲಭಮ್
॥ ೨ ॥**

ಈ ಧನದಿಂದಾಗಲಿ, ಆನೆ ಕುದುರೆಗಳಿಂದಾಗಲಿ ಅಥವಾ ರಾಜ್ಯಪ್ರಾಪ್ತಿಯಿಂದಾಗಲಿ ಏನು ಪ್ರಯೋಜನ? ಮಗ ಮಡದಿ ಮಿತ್ರರಿಂದಾಗಲಿ ಪಶು, ದೇಹ, ಮನೆ, ಮಠಗಳಿಂದಾಗಲೀ ಏನು ಪ್ರಯೋಜನ? ಹೇ ಮನಸ್ಸೇ ಇವೆಲ್ಲವೂ ಕ್ಷಣಭಂಗುರಗಳೆಂದು ತಿಳಿದುಕೊಂಡು ಶೀಘ್ರವಾಗಿ ತ್ಯಜಿಸುವುದು ಜಾಣತನ. ಆತ್ಮಸಾಕ್ಷಾತ್ಕಾರಕ್ಕಾಗಿ ಗುರುವಾಕ್ಯವನ್ನನುಸರಿಸಿ, ಶ್ರೀಪಾರ್ವತೀ ವಲ್ಲಭನನ್ನು ಮತ್ತೆ ಮತ್ತೆ ಭಜಿಸು.

**ಆಯುರ್ನಶ್ಯತಿ ಪಶ್ಯತಾಂ ಪ್ರತಿದಿನಂ ಯಾತಿ ಕ್ಷಯಂ ಯೌವನಂ
ಪ್ರತ್ಯಾಯಾಂತಿ ಗತಾಃ ಪುನರ್ನ ದಿವಸಾಃ ಕಾಲೋ ಜಗದ್ಭಕ್ಷಕಃ ।
ಲಕ್ಷ್ಮೀಸ್ತೋಯತರಂಗಭಂಗಚಪಲಾ ವಿದ್ಯುಚ್ಚಲಂ ಜೀವಿತಂ
ತಸ್ಮಾನ್ಮಾಂ ಶರಣಾಗತಂ ಶರಣದ ತ್ವಂ ರಕ್ಷ ರಕ್ಷಾಧುನಾ ॥೩ ॥**

ನೋಡುನೋಡುತ್ತಿರುವಂತೆಯೇ ದಿನದಿನಕ್ಕೂ ಆಯುಸ್ಸು ನಶಿಸುತ್ತಿದೆ. ಯೌವನ ಕ್ಷಯಿಸುತ್ತಿದೆ; ಕಳೆದುಹೋದ ದಿನಗಳು ಎಂದಿಗೂ ಹಿಂತಿರುಗವು; ಕಾಲವು ಜಗತ್ತನ್ನು ಭಕ್ಷಿಸುತ್ತಿದೆ; ಲಕ್ಷ್ಮಿಯು ಜಲದ ತರಂಗದಂತೆ ಚಂಚಲ ಸ್ವಭಾವದವಳು; ಜೀವನವು ಮಿಂಚಿನ ಸಂಚಲದಂತೆ ಕ್ಷಣಿಕವಾದದ್ದು; ಆದುದರಿಂದ ಹೇ ಶರಣದ, ಶರಣಾಗತನಾದ ನನ್ನನ್ನು ಈಗಲೇ ರಕ್ಷಿಸು, ಉದ್ಧರಿಸು.